**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ,**

**ಕುಮಟಾ**

**ಸಿ.ಸಿ.ನಂ.1133/2024**

ಸಿ.ಡಬ್ಲ್ಯು 03

ಪಿ.ಡಬ್ಲ್ಯು 02

ಸಾಕ್ಷಿದಾರರ ಹೆಸರು - **ಮಂಜುನಾಥ ವಿಠ್ಠಲ ಭಂಡಾರಿ**

ತಂದೆಯ ಹೆಸರು - ವಿಠ್ಠಲ **ಭಂಡಾರಿ**

ವಯಸ್ಸು - 35 ವರ್ಷ

ಉದ್ಯೋಗ - ಖಾಸಗಿ ಕೆಲಸ

ವಾಸ್ತವ್ಯ - ದಿವಗಿ

(ಇಂದು ದಿನಾಂಕಃ **17-03-2026** ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ - ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನನಗೆ ಚಾಸಾ 2 ರವರ ಪರಿಚಯ ಇದೆ. ನಾನು ಕಳೇದ ವರ್ಷ ಚಾಸಾ 2 ರವರೊಂದಿಗೆ ಅವರ ವಾಹನಕ್ಕೆ ವಾಯಲ್ ಚೆಂಜ್ ಮಾಡುವ ಸಲುವಾಗಿ ಶಿರ್ಶಿಗೆ ಹೋಗಿ ವಾಪಸ್ತು ಬರುವಾಗ ಪೊಲೀಸರು ನನ್ನನ್ನು ಮಾಸ್ತಿ ಹಳ್ಳದ ಹತ್ತಿರ ನನ್ನನ್ನು ನಿಲ್ಲಿಸಿದ್ದು ಆ ಸಂದರ್ಭದಲ್ಲಿ ಪೊಲೀಸರು ನನ್ನ ವಾಹನದ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ನಂತರ ಮೂರು ದಾಖಲಾತಿಗೆ ನನ್ನ ಸಹಿಯನ್ನು ಪಡೆದುಕೊಂಡು ಭಾವಚಿತ್ರವನ್ನು ಪಡೆದುಕೊಂಡಿರುತ್ತಾರೆ.

ಸಾಕ್ಷಿಗೆ ಎರಡು ದಾಖಲಾತಿಗಳನ್ನು ತೋರಿಸಿದ್ದು, ಸಾಕ್ಷಿಯು ಸ್ಧ್ರಿ ದಾಖಲಾತಿಗಳಲ್ಲಿನ ಸಹಿಯನ್ನು ನೋಡಿ ಗುರುತಿಸಿದ್ದು, ಸ್ಧ್ರಿ ದಾಖಲಾತಿಗಳು **ಪಂಚನಾಮೆ ಹಾಗೂ ಕಚ್ಚಾ ನಕಾಶೆಯಾಗಿದ್ದು, ಪಂಚನಾಮೆಯನ್ನು ನಿ.ಪಿ.1 ಎಂದು,** ಸಾಕ್ಷಿಯ ಸಹಿಯನ್ನು **ನಿ.ಪಿ.1ಬಿ ಎಂದು** ಗುರುತಿಸಲಾಯಿತು. **ಕಚ್ಚಾ ನಕಾಶೆಯು ನಿ.ಪಿ.2 ಎಂದು,** ಸಾಕ್ಷಿಯ ಸಹಿಯನ್ನು **ನಿ.ಪಿ.2ಬಿ ಎಂದು** ಗುರುತಿಸಲಾಯಿತು. ನಿಪಿ 1 ರಲ್ಲಿ ಬರೆದಿರುವ ವಿಚಾರನ ನನಗೆ ತಿಳಿದಿಲ್ಲ.

ಸಾಕ್ಷಿಗೆ ಮೂರು ಭಾವಚಿತ್ರಗಳನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು **ನಿ.ಪಿ.3 ರಿಂದ ನಿ.ಪಿ.5** ಎಂದು ಗುರುತಿಸಲಾಯಿತು.

ಸಾಕ್ಷಿಗೆ ಇನ್ನೋಂದು ದಾಖಲಾತಿಯನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸ್ಧ್ರಿ ದಾಖಲಾತಿಯು **ವಾಹನ ಜಪ್ತು ಪಂಚನಾಮೆಯಾಗಿದ್ದು,** ಅದನ್ನು **ನಿ.ಪಿ.6 ಎಂದು,** ಸಾಕ್ಷಿಯ ಸಹಿಯನ್ನು **ನಿ.ಪಿ.6ಬಿ ಎಂದು** ಗುರುತಿಸಲಾಯಿತು.

ಸಾಕ್ಷಿಗೆ ಎರಡು ಭಾವಚಿತ್ರಗಳನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು **ನಿ.ಪಿ.7 ಹಾಗೂ ನಿ.ಪಿ.8** ಎಂದು ಗುರುತಿಸಲಾಯಿತು. ನಿಪಿ6 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುವನ್ನು ವಶಪಡಿಸಿಕೊಂಡಿರುವುದಿಲ್ಲ.

**(ಈ ಹಂತದಲ್ಲಿ ಸ್ಧ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

**ಪಾಟೀ ಸವಾಲು –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿನಾಂಕಃ 10/05/2024 ರಂದು ಚಾಸಾ 12 ರವರು ನನ್ನ ಹಾಗೂ ಚಾಸಾ 3 ರವರ ಸಮಕ್ಷಮದಲ್ಲಿ ಚಾಸಾ 1 ರವರು ತೋರಿಸಿದಂತೆ 16-00 ಗಂಟೆಯಿಂದ 17-00 ಗಂಟೆಯವರೆಗೆ ಕತಗಾಲದ ಮರಾಸ್ತಿ ಹಳ್ಳದ ಹತ್ತಿರ ರಾ.ಹೆ. 766 ರಲ್ಲಿಃ ಅಪಘಾತಕ್ಕೆ ಸಂಬಂಧಿಸಿದಂತೆ ನಿಪಿ1 ರಂತೆ ಪಂಚನಾಮೆಯನ್ನು ಮಾಡಿ ನಿಪಿ 2 ರಂತೆ ಕಚ್ಚಾ ನಕಾಶೆಯನ್ನು ತಯಾರಿಸಿ, ಲಾರಿ ಸಂಖ್ಯೆ ಎಚ್ ಆರ್ 74 ಬಿ 8339 ನೇದ್ದನ್ನು ವಾಹನವನ್ನು ವಶಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದ್ರಿ ಸಂದರ್ಭದಲ್ಲಿ ನಿಪಿ3 ರಿಂದ 5 ರಂತೆ ಭಾವಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಪೊಲೀಸ ಠಾಣೆಯಲ್ಲಿ ನನ್ನ ಹಾಗೂ ಚಾಸಾ 3 ರವರ ಸಮಕ್ಷಮ ಅಪಘಾತಪಡಿಸಿದ ವಾಹನ ಸಂಖ್ಯೆ ಕೆಎ 31 ಎಫ್ 1488 ನೇದ್ದನ್ನು 17-45 ರಿಂದ 18-45 ಗಂಟೆಯವರಗೆ ನಿಪಿ6 ರಂತೆ ಪಂಚನಾಮೆಯನ್ನು ಮಾಡಿ ನಿಪಿ7 ಹಾಗೂ 8 ರಂತೆ ಭಾವಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲ ವಿಷಯಗಳನ್ನು ತಿಳಿದಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು –ಆರೋಪಿ ಪರ ಕುಮಾರಿ. ಸಿ.ಎಮ್.ಪಿ. ವಕೀಲರಿಂದ**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**C.W.** 03 **P.W.** 02

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರಭಾರ ಪ್ರಧಾನ ಪ್ರ.ದ.ನ್ಯಾ.ದಂ. ಕುಮಟಾ